# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಕೆ ಎ ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 957 |
| ಉತ್ತರಿಸಬೇಕಾದ ದಿನಾಂಕ | : | 17-12-2024 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಡಿಜಿಟಲೀಕರಣಗೊಳಿಸುವ ಯೋಜನೆ ಅನುಷ್ಠಾನ ಗೊಳಿಸಲಾಗುತ್ತಿದೆಯೇ: ಹಾಗಿದ್ದಲ್ಲಿ ಈ ಯೋಜನೆಯ ರೂಪ-ರೇಷೆಗಳು ಯಾವುವು; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು) | ಹೌದು.<br><br>ರಾಜ್ಯದಲ್ಲಿರುವ ಕೃಷಿ ಪತ್ತಿನ ಸಹಕಾರ ಸಂಘಗಳ ಡಿಜಿಟಲೀಕರಣಗೊಳಿಸುವ ಯೋಜನೆಯನ್ನು 2022-23 ನೇ ಸಾಲಿನಿಂದ ಮುಂದಿನ 5 ವರ್ಷಗಳವರೆಗೆ ಅನುಷ್ಠಾನಗೊಳಿಸಲಾಗುತ್ತಿದೆ.<br>ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ರೂಪು ರೇಷೆಗಳು ಈ ಕೆಳಗಿನಂತಿರುತ್ತವೆ.<br>1. ಈ ಯೋಜನೆಗೆ ಆಯ್ಕೆ ಆಗಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಲೆಕ್ಕ ಪರಿಶೋಧನೆಯನ್ನು ಪೂರ್ಣಗೊಳಿಸ ಬೇಕಿದ್ದು, 2022-23 ನೇ ಸಾಲಿನ ಲೆಕ್ಕ ಪರಿಶೋಧನೆ ಪೂರ್ಣಗೊಳಿಸಿದ 5491 ಪ್ಯಾಕ್ಸ್ ಗಳನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಲಾಗಿದೆ.<br><br>2. ಈ ಯೋಜನೆಗೆ ಒಂದು ಪ್ಯಾಕ್ಸ್ ಗೆ ಗರಿಷ್ಟ ವೆಚ್ಚ ಮೊತ್ತ ರೂ.3.91 ಲಕ್ಷಗಳಾಗಿರುತ್ತದೆ. |

| | | |
|---|---|---|
| | | 3. ಪ್ರತೀ ಪ್ಯಾಕ್ಸ್ ಗೆ ರೂ.0.72 ಲಕ್ಷ ಮೊತ್ತದಲ್ಲಿ ಕೇಂದ್ರ ಸರ್ಕಾರದಿಂದ ಏಕೀಕೃತ ತಂತ್ರಾಂಶವನ್ನು ಒದಗಿಸಲಿದ್ದು, ಈ ಮೊತ್ತವನ್ನು ನಬಾರ್ಡ್ ಮತ್ತು ಕೇಂದ್ರ ಸರ್ಕಾರ ಭರಿಸುತ್ತವೆ.<br><br>4. ಪ್ರತೀ ಪ್ಯಾಕ್ಸ್ ಗೆ ಗರಿಷ್ಟ ರೂ.1.22 ಲಕ್ಷಗಳ ಮೊತ್ತದಲ್ಲಿ ಹಾರ್ಡ್‌ವೇರ್ ಗಳಾದ Desktop, Multifunctional device(Printer, scanner, copier), Physical VPN device, Biometric scanner, UPS ಗಳನ್ನು ರಾಜ್ಯ ಸರ್ಕಾರ ಜೆಮ್ ಪೋರ್ಟಲ್ ಮೂಲಕ ಟೆಂಡರ್ ಕರೆಯುವುದರ ಮೂಲಕ ಒದಗಿಸಬೇಕಿದ್ದು, ಈ ಮೊತ್ತವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ 60:40 ರ ಅನುಪಾತದಲ್ಲಿ ಭರಿಸಲಾಗುತ್ತಿದೆ.<br><br>5. ಪ್ರತೀ ಪ್ಯಾಕ್ಸ್ ಗೆ ಗರಿಷ್ಟ ರೂ.1.87 ಲಕ್ಷ ಮೊತ್ತದಲ್ಲಿ ಪ್ಯಾಕ್ಸ್ ಗಳ ದತ್ತಾಂಶವನ್ನು ಏಕೀಕೃತ ತಂತ್ರಾಂಶಕ್ಕೆ ನಬಾರ್ಡ್ ಆಯ್ಕೆ ಮಾಡಿದ ಪ್ಯಾನಲ್ ನಲ್ಲಿನ ಸಿಸ್ಟಮ್ ಇಂಟಿಗ್ರೇಟರ್ಸ್ ಮೂಲಕ ಅಳವಡಿಸಿ (Digitization) 5 ವರ್ಷಗಳ ಕಾಲ ಪ್ಯಾಕ್ಸ್‌ಗೆ ತಂತ್ರಾಂಶ ಸಪೋರ್ಟ್ (handholding and support) ಮಾಡಬೇಕಿದ್ದು, ಈ ಮೊತ್ತವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ 60:40 ರ ಅನುಪಾತದಲ್ಲಿ ಭರಿಸಲಾಗುತ್ತಿದೆ.<br><br>6. ಪ್ರತೀ ಪ್ಯಾಕ್ಸ್ ಗೆ ತರಬೇತಿ ವೆಚ್ಚ ರೂ.0.10 ಲಕ್ಷಗಳಾಗಲಿದ್ದು, ಈ ಮೊತ್ತವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಭರಿಸುತ್ತಿವೆ. |

| | | |
|---|---|---|
| | | ಮೊದಲ ಹಂತದಲ್ಲಿ ಯೋಜನೆಗೆ ಆಯ್ಕೆಯಾದ 5941 ಪ್ಯಾಕ್ಸ್ ಗಳ ಪೈಕಿ ಎಲ್ಲಾ ಪ್ಯಾಕ್ಸ್ ಗಳಿಗೂ ಹಾರ್ಡ್ ವೇರ್ ಗಳನ್ನು ಸರಬರಾಜು ಮಾಡಿದ್ದು, 4367 ಪಾಕ್ಸ್ ಗಳಲ್ಲಿ ದಿನಾಂಕ: 31-03-2024 ಕ್ಕೆ ಇದ್ದಂತೆ ದತ್ತಾಂಶ ಸಂಗ್ರಹ (DCT), 605 ಪ್ಯಾಕ್ಸ್ ಗಳಲ್ಲಿ ದಿ:01-04-2024 ರ ನಂತರ ವ್ಯವಹಾರಗಳ ಎಂಟ್ರಿ ಕಾರ್ಯ, 46 ಪ್ಯಾಕ್ಸ್‌ಗಳ Go-live ಕಾರ್ಯ ಪೂರ್ಣಗೊಂಡಿರುತ್ತದೆ. |
| ಆ) | ರಾಜ್ಯದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದಿಂದ ಇದುವರೆಗೂ ದೊರೆತಿರುವ ಅನುದಾನವೆಷ್ಟು; ಮತ್ತು ರಾಜ್ಯದಲ್ಲಿ ಇದುವರೆಗೂ ಎಷ್ಟು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸಾಮಾನ್ಯ ಸೇವಾ ಕೇಂದ್ರಗಳಿಗೆ ಪರಿವರ್ತಿಸಲಾಗಿದೆ; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು) | ಪ್ಯಾಕ್ಸ್ ಗಳ ಗಣಕೀಕರಣ ಯೋಜನೆಯಲ್ಲಿ ಇದುವರೆಗೆ ಕೇಂದ್ರ ಸರ್ಕಾರದಿಂದ ರೂ.52.29 ಕೋಟಿ ಹಾಗೂ ರಾಜ್ಯ ಸರ್ಕಾರದಿಂದ ರೂ.34.84 ಕೋಟಿ ಹೀಗೆ ಒಟ್ಟು ರೂ.87.13 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.<br><br>ರಾಜ್ಯದಲ್ಲಿ ದಿ:31-03-2024 ರ ಅಂತ್ಯಕ್ಕೆ ಇದ್ದ 6109 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪೈಕಿ 5491 ಪ್ಯಾಕ್ಸ್ ಗಳನ್ನು ಗಣಕೀಕರಣಗೊಳಿಸಲಾಗುತ್ತಿದ್ದು, ಈ ಪೈಕಿ 1235 ಪ್ಯಾಕ್ಸ್ ಗಳು ಸಾಮಾನ್ಯ ಸೇವಾ ಕೇಂದ್ರಗಳಾಗಿ ಪರಿವರ್ತನೆಯಾಗಿರುತ್ತವೆ.<br>ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಇ) | ಈ ಯೋಜನೆ ಅಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರಿಗೆ ನೀಡುತ್ತಿರುವ ಸೇವೆಗಳು ಯಾವುವು? (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು) | ಈ ಯೋಜನೆಯಲ್ಲಿ ಆಯ್ಕೆಯಾದ 5491 ಪ್ಯಾಕ್ಸ್‌ಗಳು ಸಾಲ ಮತ್ತು ಸಾಲೇತರ ಸೇವೆಗಳು ಮತ್ತು ಕೃಷಿ ಮತ್ತು ಕೃಷಿಯೇತರ ಸೇವೆಗಳನ್ನು ರೈತರಿಗೆ ಮತ್ತು ಗ್ರಾಮೀಣ ಪ್ರದೇಶದ ಸದಸ್ಯರಿಗೆ ಒದಗಿಸುವ ಜೊತೆಗೆ ಸಾಮಾನ್ಯ ಸೇವಾ ಕೇಂದ್ರಗಳಾಗಿ 1235 ಪ್ಯಾಕ್ಸ್ ಗಳು ಪ್ರಧಾನ ಮಂತ್ರಿ ಕಲ್ಯಾಣ ಯೋಜನೆಗಳು, ಆಧಾರ್ ಸೇವೆಗಳು, |

| | | |
|---|---|---|
| | | ಪ್ಯಾನ್ ಕಾರ್ಡ್ ಸೇವೆಗಳು, ಪಾಸ್ ಪೋರ್ಟ್ ಸೇವೆಗಳು, ಬ್ಯಾಂಕಿಂಗ್ ಸೇವೆಗಳು, ಕೃಷಿ ಸೇವೆಗಳು, ಆರೋಗ್ಯ ಇಲಾಖೆ ಸೇವೆಗಳು, ಆನ್‌ಲೈನ್ ಪಾವತಿ ಸೇವೆಗಳು, ಶೈಕ್ಷಣಿಕ ಸೇವೆಗಳು, ರೈಲ್ವೆ/ಬಸ್/ವಿಮಾನ ಟಿಕೆಟ್ ಬುಕಿಂಗ್ ಸೇವೆಗಳು ಹೀಗೆ ಒಟ್ಟಾರೆಯಾಗಿ ರೈತರಿಗೆ 300 ವಿವಿಧ ಬಗೆಯ ಇ–ಸೇವೆಗಳನ್ನು ಒದಗಿಸುತ್ತಿರುತ್ತವೆ. |
| ಈ) | ಸದರಿ ಯೋಜನೆ ಅಡಿ ನಬಾರ್ಡ್‌ನಿಂದ ದೊರೆಯುವ ಸಾಲ–ಸೌಲಭ್ಯಗಳು ರಾಜ್ಯ ಸಹಕಾರಿ ಬ್ಯಾಂಕ್ ಮತ್ತು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ಗಳೊಂದಿಗೆ ಜೋಡಿಸಿ, ಪ್ರಾಥಮಿಕ ಸಹಕಾರ ಸಂಘಗಳನ್ನು ಸಮ್ಮಿಲನ ಮಾಡಲು ಉಪಯೊಗಿಸುತ್ತಿರುವ ತಂತ್ರಾಂಶಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | ಯೋಜನೆಯಲ್ಲಿ ಆಯ್ಕೆಯಾದ ಎಲ್ಲಾ ಪ್ಯಾಕ್ಸ್‌ಗಳ ಮಾಹಿತಿಯು (MIS) ಸಾಲ ಒದಗಿಸುವ ಸಂಸ್ಥೆ ಮತ್ತು ಸರ್ಕಾರದ ಅಂಗ ಸಂಸ್ಥೆಗಳಿಗೆ ಲಭ್ಯವಾಗುವುದರಿಂದ ಈ ಸಂಸ್ಥೆಗಳು ಪ್ಯಾಕ್ಸ್ ಗಳ ಮೂಲಕ ರೈತರಿಗೆ ಮತ್ತು ಗ್ರಾಮೀಣ ಭಾಗದ ಜನರಿಗೆ ಸಾಲ ಮತ್ತು ಸಾಲೇತರ ಸೇವೆಗಳನ್ನು ಒದಗಿಸಲು ಮತ್ತು ಸರ್ಕಾರದ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸಲು ಸಹಾಯವಾಗಲಿದ್ದು, ಆಯ್ಕೆಯಾದ ಎಲ್ಲಾ ಪ್ಯಾಕ್ಸ್ ಗಳ Go live ಹಂತ ಪೂರ್ಣಗೊಂಡ ನಂತರ ಸರ್ಕಾರದ ಮತ್ತು ಬ್ಯಾಂಕುಗಳ ತಂತ್ರಾಂಶವನ್ನು ಪ್ಯಾಕ್ಸ್ ತಂತ್ರಾಂಶಕ್ಕೆ ಜೋಡಣೆ ಮಾಡುವ ಕಾರ್ಯವನ್ನು ಆರಂಭಿಸಲಾಗುತ್ತದೆ. |

**ಸಂಖ್ಯೆ: ಸಿಒ 296 ಸಿಎಲ್ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀಕೆ ಎ ತಿಪ್ಪೇಸ್ವಾಮಿ. (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:957ಕ್ಕೆ ಅನುಬಂಧ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ ಯೋಜನೆಯಲ್ಲಿ ಆಯ್ಕೆಯಾದ ಸಂಘಗಳು ಮತ್ತು ಸಾಮಾನ್ಯ ಸೇವಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿರುವ ಸಂಘಗಳ ವಿವರ

| ಕ್ರ.ಸಂಖ್ಯೆ | ಜಿಲ್ಲೆಯ ಹೆಸರು | ರಾಜ್ಯದಲ್ಲಿರುವ ಒಟ್ಟು ಪ್ಯಾಕ್ಸ್ ಗಳ ಸಂಖ್ಯೆ | ಗಣಕೀಕರಣ ಯೋಜನೆಯಲ್ಲಿ ಆಯ್ಕೆಯಾದ ಸಂಘಗಳು | ಸಾಮಾನ್ಯ ಸೇವಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿರುವ ಸಂಘಗಳ ಸಂಖ್ಯೆ |
|---|---|---|---|---|
| 1 | ಬೀದರ | 188 | 188 | 25 |
| 2 | ಕಲಬುರಗಿ | 244 | 179 | 73 |
| 3 | ಯಾದಗಿರ | 109 | 86 | 24 |
| 4 | ರಾಯಚೂರು | 135 | 135 | 88 |
| 5 | ಕೊಪ್ಪಳ | 118 | 115 | 75 |
| 6 | ವಿಜಯನಗರ | 113 | 101 | 0 |
| 7 | ಬಳ್ಳಾರಿ | 88 | 76 | 64 |
| 8 | ಮೈಸೂರು | 209 | 176 | 53 |
| 9 | ಚಾಮರಾಜನಗರ | 108 | 103 | 7 |
| 10 | ಮಂಡ್ಯ | 237 | 227 | 106 |
| 11 | ಹಾಸನ | 229 | 215 | 141 |
| 12 | ಚಿಕ್ಕಮಗಳೂರು | 130 | 128 | 33 |
| 13 | ಕೊಡಗು | 76 | 76 | 8 |
| 14 | ದಕ್ಷಿಣ ಕನ್ನಡ | 121 | 121 | 105 |
| 15 | ಉಡುಪಿ | 56 | 56 | 1 |
| 16 | ಬೆಳಗಾವಿ | 1353 | 1156 | 138 |
| 17 | ವಿಜಯಪೂರ | 290 | 266 | 14 |
| 18 | ಬಾಗಲಕೋಟ | 290 | 265 | 59 |
| 19 | ಧಾರವಾಡ | 168 | 152 | 29 |
| 20 | ಗದಗ | 182 | 160 | 30 |
| 21 | ಹಾವೇರಿ | 232 | 227 | 64 |
| 22 | ಉತ್ತರ ಕನ್ನಡ | 176 | 156 | 18 |
| 23 | ಬೆಂ.ನಗರ | 48 | 37 | 8 |
| 24 | ಬೆಂ.ಗ್ರಾಮಾಂತರ | 72 | 69 | 28 |
| 25 | ರಾಮನಗರ | 104 | 98 | 3 |
| 26 | ತುಮಕೂರು | 254 | 230 | 0 |
| 27 | ಕೋಲಾರ | 105 | 85 | 6 |
| 28 | ಚಿಕ್ಕಬಳ್ಳಾಪುರ | 148 | 116 | 0 |
| 29 | ಚಿತ್ರದುರ್ಗ | 166 | 149 | 2 |
| 30 | ದಾವಣಗೆರೆ | 184 | 176 | 19 |
| 31 | ಶಿವಮೊಗ್ಗ | 176 | 167 | 14 |
| | | **6109** | **5491** | **1235** |